
॥ ಶ್ರೀ ॥



# ಗೋಪುರದ ಹಿರಿಮೆ


ಲೇಖಕಿ :

**ಶ್ರೀ ದೇವಿ, ಯಾದವಾದ್ರಿ**

C/o ಎಂ. ಆರ್. ತಿರುನಾರಾಯಣನ್

3018, ನೂರಡಿ ರಸ್ತೆ, ನೆಹರು ನಗರ, ಮಂಡ್ಯ


**ಮಂಡ್ಯದ ಶ್ರೀ ಲಕ್ಷ್ಮೀಜನಾರ್ಧನಸ್ವಾಮಿ ದೇವಾಲಯ ಗೋಪುರ**
**ಉದ್ಘಾಟನಾ ಮಹೋತ್ಸವ**

ತಾ॥ **3-7-77**


ದ್ವಿತೀಯ ಮುದ್ರಣ : ಆಗಸ್ಟ್ 1977

ಪ್ರಕಟಿತ.

ಮಂಡಯಂ ನಲ್ಲಾನ್ ಚಕ್ರವರ್ತಿ ನರಸಿಂಹಾಚಾರ್, ಎಂ. ಎ.,

ಪೈಂಗಳನಾಮ ಸಂವತ್ಸರ
ಅಧಿಕ ಆಷಾಡ ಕೃಷ್ಣ

ಬೆಲೆ
30 ಪೈಸೆ

॥ ಶ್ರೀ ॥

ಶ್ರೀಮತೆ ರಾಮಾನುಜಾಯ ನಮಃ

ಶ್ರೀರಂಗ ಮಂಗಳ ಮಣಿಂ ಕರುಣಾನಿವಾಸಂ
ಶ್ರೀವೆಂಕಟಾದ್ರಿ ಶಿಖರಾಲಯ ಕಾಳಮೇಘಂ ।
ಶ್ರೀಹಸ್ತಿ ಶೈಲ ಶಿಖರೋಜ್ವಲ ಪಾರಿಜಾತಂ
ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ ॥

ನಾಡಿಗೆ ದೇವಾಲಯಗಳು ಅತಿ ಮುಖ್ಯ. ಯಾವ ಊರಿನಲ್ಲಿ ಭಗವನ್ಮಂದಿರಗಳಿಲ್ಲವೋ ಆ ಊರಿನಲ್ಲಿ ವಾಸಿಸಬಾರದೆಂದು ಹಿರಿಯರ ಆಜ್ಞೆ. ಈ ಭಗವನ್ಮಂದಿರ ಅಥವಾ ದೇವಾಲಯಗಳಲ್ಲಿ ಆರಾಧಿಸುವ ಮೂರ್ತಿಯನ್ನು "ಅರ್ಚಾವಿಗ್ರಹ" ಅಥವಾ "ಅರ್ಚಾವತಾರ" ಎನ್ನುತ್ತಾರೆ. ಸನಾತನ ಆಗಮಗಳ ಪ್ರಕಾರ ವೈಷ್ಣವ ದೇವಾಲಯಗಳಲ್ಲಿ "ಪಾಂಚರಾತ್ರ" ಮತ್ತು "ವೈಖಾನಸ" ಆಗಮದ ಪ್ರಕಾರ ಆರಾಧನೆ ನಡೆಯುತ್ತದೆ. ಒಂದು ಗ್ರಾಮವು, ನಗರವಾಗಿ ಅಭಿವೃದ್ಧಿ ಹೊಂದಲು, ಒಂದು ಚಿಕ್ಕ ದೇವಾಲಯವು ವಿಸ್ತೃತವಾಗಲು, ದಿನೇ–ದಿನೇ ಆ ಊರೂ, ದೇವಾಲಯವೂ, ನಗರ ನಿವಾಸಿಗಳೂ ಸಂತುಷ್ಟರಾಗಿರುವುದಕ್ಕೆ ಕಾರಣ ಆಗಮಶಾಸ್ತ್ರದಲ್ಲಿ ಈ ರೀತಿ ಹೇಳಿದೆ–ಆಗಮಶಾಸ್ತ್ರದ ಪ್ರಕಾರ ದೇವಾಲಯವನ್ನು ನಿರ್ಮಾಣಮಾಡಿ ಬಿಂಬ ಪ್ರತಿಷ್ಠೆ, ಅರ್ಚನೆ– ಆರಾಧನಾದಿಗಳಲ್ಲಿ ಮಂತ್ರ ಲೋಪವಿಲ್ಲದೆ, ಶ್ರದ್ಧಾವಂತರಾದ ಕಾರ್ಯಕರ್ತರು, ಕೈಂಕರ್ಯ ತತ್ಪರರು, ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ ಮತ್ತು ಬ್ರಹ್ಮೋತ್ಸವವನ್ನು, ದೀಪ–ಧೂಪ, ಪುಷ್ಪ ನೈವೇದ್ಯ, ಬಲಿ ಮುಂತಾದ ಕ್ರಿಯಾಕಲಾಪವನ್ನು ಯಥಾ ಕಾಲದಲ್ಲಿ ಸಾಂಗೋಪಾಂಗವಾಗಿ ನಡೆಸಿದರೆ ಆ ಊರು ವಿಸ್ತೃತಗೊಂಡು ವಿದ್ಯೆ, ವ್ಯಾಪಾರ, ಕೃಷಿ, ಉತ್ತಮಗೊಳ್ಳುತ್ತದೆ. ನಮ್ಮ ತಂದೆ, ತಾತನವರ ಕಾಲದಲ್ಲಿ ಈ ಊರು ಒಂದು ಚಿಕ್ಕ ಗ್ರಾಮವಾಗಿದ್ದಿತು. ಕೃಷಿ, ಸಾಧಾರಣ ಮಟ್ಟದಲ್ಲಿತ್ತು. ವ್ಯಾಪಾರ ವಾರಕ್ಕೆ ಒಂದುದಿನದ ಸಂತೆಯವ್ಯಾಪಾರ ಮಾತ್ರ ವಿದ್ಯಾಭ್ಯಾಸಕ್ಕೆ ಪರಊರಿಗೆ ಹೋಗಬೇಕಾಗಿತ್ತು. ಈಗ ಮಂಡ್ಯನಗರ ಅತ್ಯಂತ ವಿಸ್ತೃತವಾಗಿ ವಿದ್ಯೆ, ವಾಪಾರ ಮತ್ತು ಕೃಷಿಯಲ್ಲಿ ಬಹಳ ಮುಂದು ವರೆದಿದೆ ಅದಕ್ಕೆ ಮುಖ್ಯಕಾರಣ ಶ್ರೀ ಲಕ್ಷೀ ಜನಾರ್ಧನಸ್ವಾಮಿಯ ಪರಮಕೃಪೆಯೇ

ಆಗಿರುತ್ತದೆ. ಶ್ರೀ|| ಉ. ವೇ. ಅ. ನ. ಶ್ರೀನಿವಾಸಯ್ಯಂಗಾರ್ಯರು ತಮ್ಮ "ದ್ರಾವಿಡ ವೇದ ಸಾರಾರ್ಥ" ಎಂಬ ಗ್ರಂಥದಲ್ಲಿ "ದೇವಾಲಯ ಊರಿನ ಹೃದಯ ಧರ್ಮ ಮತ್ತು ಮಂಗಳ ನಿಧಿ" ಎಂದಿರುತ್ತಾರೆ.

ಈ ಊರಿನ ದೇವಸ್ಥಾನದಲ್ಲಿ ವೈಖಾನಸ ಆಗಮದ ಪ್ರಕಾರ ಆರಾಧನಾ ಪೂಜಾವಿಧಿಗಳು ನಡೆಯುತ್ತಿದೆ. ವೈಖಾನಸ ಪಂಥೀಯರು ವೈಷ್ಣವರಲ್ಲಿ ಬಹು ಮುಖ್ಯ ಸ್ಥಾನವನ್ನು ಪಡೆದಿರುತ್ತಾರೆ. ವೈಖಾನಸ ಆಗಮದ ಮೂಲವು ವಿಖನಸಋಷಿ ಅಥವ ಚತುರ್ಮುಖ ಬ್ರಹ್ಮನಿಂದ ತನ್ನ ಶಿಷ್ಯರಾದ 'ಅತ್ರಿ' 'ಮರೀಚಿ', 'ಕಾಶ್ಯಪ' ಮತ್ತು 'ಭೃಗು' ಇವರುಗಳ ಮೂಲಕ ಪ್ರಕಾಶಿಸಲ್ಪಟ್ಟ ಶಾಸ್ತ್ರವಾಗಿದೆ. ಈ ಶಾಸ್ತ್ರವನ್ನು ಸಾಕ್ಷಾತ್ ಭಗವಂತನಾದ ಮಹಾವಿಷ್ಣುವು ಬ್ರಹ್ಮನಿಗೆ ನೈಮಿಶಾರಣ್ಯದಲ್ಲಿ ವೈಖಾನಸಋಷಿ ರೂಪದಿಂದ ಉಪದೇಶಿಸಿದನು. ಆದ್ದರಿಂದ ಪಾಂಚರಾತ್ರ ಉಪದೇಶಕನು ಹೇಗೆ ಮಹಾವಿಷ್ಣುವೋ ಹಾಗೆಯೇ ವೈಖಾನಸ ಆಗಮದ ಉಪದೇಶಕನೂ ಸಾಕ್ಷಾತ್ ಶ್ರೀಮನ್ನಾರಾಯಣನೇ ! ಆದ್ದರಿಂದ ಈ ಶಾಸ್ತ್ರವು ವೈಖಾನಸರ ಹೆಸರಿನಿಂದಲೇ ಕರೆಯಲ್ಪಡುತ್ತದೆ.

"ಶ್ರೀಲಕ್ಷ್ಮೀ ವಿಶಿಷ್ಟಾದ್ವೈತ ದರ್ಶನ" ಎಂದು ಒಂದು ಶಾರೀರಕ ಭಾಷ್ಯವು ಈ ಆಗಮದ ಹಿರಿಮೆಯನ್ನು ಪ್ರತಿಪಾದಿಸುತ್ತದೆ. "ದಶವಿಧಹೇತು ನಿರೂಪಣ" ಮತ್ತು "ಉತ್ತಮ ಬ್ರಹ್ಮವಿದ್ಯಾ" ಮೊದಲಾದ ಗ್ರಂಥಗಳು ವೈಖಾನಸ ಆಗಮದ ಶ್ರೇಷ್ಠತೆಯನ್ನು ವಿಶದವಾಗಿ ತಿಳಿಸಿವೆ. ಇವುಗಳಿಗೆಲ್ಲಾ ನಿದರ್ಶನವಾಗಿ ತಿರುಮಲೈ ತಿರುಪತಿಯ ವೆಂಕಟೇಶ್ವರ ದೇವಾಲಯದಲ್ಲಿ ಶ್ರೀನಿವಾಸನ ಆರಾಧನ ಪೂಜಾವಿಧಿ ವೈಖಾನಸ ಆಗಮದ ಪ್ರಕಾರ ನಡೆಯುತ್ತಿದೆ. "ಕಲೌ ವೆಂಕಟನಾಯಕ" ಎಂದು ಆಪ್ತ ಆಜ್ಞೆ.

ಶ್ರೀ ವೈಷ್ಣವ ಆಳ್ವಾರ್ರುಗಳು ಮತ್ತು ಆಚಾರ್ಯರುಗಳು ಈ ಅರ್ಚಾವತಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುತಾರೆ. "ಅರ್ಚಾ" ಶಬ್ದದ ಅರ್ಥಪೂಜೆ. ಈ ಅರ್ಚಾವಿಗ್ರಹವು ಅಪ್ರಾಕೃತ, ಶುದ್ಧ ಸತ್ವಮಯವಾದ ಭಗವಂತನ ದಿವ್ಯ ಮಂಗಳ ವಿಗ್ರಹ. ಯಾವ ರೀತಿ ಗೋಮಾತೆಯ ಶರೀರದಲ್ಲಿ ಅಮೃತವು ತುಂಬಿದ್ದರೂ ಹಾಲು ಕೆಚ್ಚಲಿನ ಮುಖಾಂತರವೇ ಪಡೆಯಬೇಕೋ ಹಾಗೆಯೇ

ಭಗವಂತನು ಸರ್ವವ್ಯಾಪಿಯಾದರೂ ದೇವಾಲಯಗಳಲ್ಲಿ ಅರ್ಚಾಮೂರ್ತಿ ಯಾಗಿ ಕಂಗೊಳಿಸುತ್ತಾನೆ.

ಕಾರಣ ಪ್ರತಿಷ್ಠೆ ಮತ್ತು ಮಂತ್ರ ಪ್ರಭಾವ. ಆಯಾ ವಿಗ್ರಹಗಳಲ್ಲಿ ನೆಲೆಸಿ ಪೂಜೆಯನ್ನು ಸ್ವೀಕರಿಸುತ್ತಾನೆ. ಶ್ರೀರಾಮಾಯಣ, ಮಹಾಭಾರತ ವಿಷ್ಣುಸಹಸ್ರನಾಮಗಳಲ್ಲಿ ಭಗವಂತನ ದಿವ್ಯಮಂಗಳ ವಿಗ್ರಹಗಳು ಪರ, ವ್ಯೂಹ, ವಿಭವ, ಅರ್ಚ ಮತ್ತು ಅಂತರ್ಯಾಮಿ ಎಂದು ಐದು ವಿಧವಾಗಿ ವಿವರಿಸಿರುತ್ತಾರೆ. ಭಗವಂತನ ಪರಸ್ವರೂಪ ಕೇವಲ ನಿತ್ಯ–ಮುಕ್ತರಿಗೆ ಮಾತ್ರ ಲಭ್ಯ. ಜಗದ್ರಕ್ಷಣೆಯನ್ನು ಚಿಂತಿಸುತ್ತಾ ಕ್ಷೀರ ಸಾಗರದಲ್ಲಿ ಆದಿ ಶೇಷನ ಮೇಲೆ ಪವಡಿಸಿ ಆಶ್ರಿತರ ತಾಪವನ್ನು ಪರಿಹರಿಸುವ ವ್ಯೂಹ ಪರವಾಸುದೇವನನ್ನು ಆರಾಧಿಸುವವರು ದಿವ್ಯಸೂರಿಗಳಿಗಿಂತ ಮೇಲಾದವರು. ಅನಂತರ ವಿಭವಾವತಾರವಾದರೋ ತತ್ಕಾಲದಲ್ಲಿ ಜೀವಿಸಿದ್ದವರಿಗೆ ಮಾತ್ರ ಪ್ರಾಪ್ತ. ಅಂತರ್ಯಾಮಿ ಸರ್ವರ ಹೃದಯದಲ್ಲಿ ನೆಲೆಸಿರುತ್ತಾನೆ. ಆದರೆ ಅರ್ಚಾವತಾರ ಸರ್ವಕಾಲದಲ್ಲಿಯೂ, ಸಮಸ್ತ ಕಲ್ಯಾಣಗುಣಾತ್ಮಕನಾಗಿ, ಸರ್ವ ಸೌಂದರ್ಯ ಲಾವಣ್ಯನಿಧಿಯಾಗಿ, ಸರ್ವಫಲಪ್ರದನಾಗಿ ಪ್ರತಿ ಒಂದು ಊರಿನಲ್ಲಿಯೂ ನೆಲಸಿ ಭಕ್ತರ ಅಭೀಷ್ಟಗಳನ್ನು, ಸಂಕಷ್ಟಗಳನ್ನು ಪರಿಹರಿಸು ತ್ತಾನೆ.

ಊರಿನ, ರಾಷ್ಟ್ರದ, ವಿಶ್ವದ ಕ್ಷೇಮಕ್ಕಾಗಿ ಆಗಮರೀತ್ಯಾ ದೇವಾಲಯ ಗಳಲ್ಲಿ ದಿವ್ಯಮಂಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸುತ್ತಾರೆ. ಈಗ ವಿದೇಶ ಗಳಲ್ಲೂ ನಮ್ಮ ಭಾರತೀಯ ಸಂಸ್ಕೃತಿ, ಆಗಮಶಾಸ್ತ್ರಕ್ಕನುಸಾರವಾಗಿ ಶ್ರೀರಾಮ, ಶ್ರೀಕೃಷ್ಣ, ವೆಂಕಟೇಶ್ವರ, ಗಣಪತಿ ಮತ್ತು ಆಂಜನೇಯ ಮುಂತಾದ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಾ–ಅರ್ಚನಾದಿಗಳನ್ನು ನಡೆ ಸುತ್ತಿದ್ದಾರೆ. ಹೀಗೆ ಪ್ರತಿಷ್ಠಾಪಿಸಿರುವ ದೇವಾಲಯಗಳಲ್ಲಿ ಋಷಿಗಳಿಂದ ಆಳ್ವಾರುಗಳಿಂದ ಮತ್ತು ರಾಜರಿಂದ ಪ್ರತಿಷ್ಠಾಪಿಸಲ್ಪಟ್ಟ ವಿಗ್ರಹಗಳು ಪ್ರಾಚೀನವಾದವು. ನಮ್ಮ ಊರಿನ ಲಕ್ಷ್ಮೀಜನಾರ್ಧನಸ್ವಾಮಿಯ ದಿವ್ಯ ಮಂಗಳ ವಿಗ್ರಹವು ಮಾಂಡವ್ಯ ಋಷಿಯಿಂದ ಪ್ರತಿಷ್ಠಾಪಿತವಾದುದ್ದು.
(ಪಾರಮೇಶ್ವರ ಸಂಹಿತೆಯಲ್ಲ–ಅ. 8, ಶ್ಲೋಕ 177 ರಿಂದ 80 ರವರೆಗೆ)

ಪರವ್ಯೂಹಾದಿ ರೂಪಸ್ಯ ವಿಷ್ಣೋಃ ದಿವ್ಯಾಲಯಾದಿಷು ।
ಪ್ರಾಸಾದ ಬೇರ ಪ್ರಕಾರ ಗೋಪುರ ದ್ವಾರ ಮಂಟಪಾನ್ ॥
ಪಾಚನಾಲಯ ಪಾನೀಯಶಾಲಾ ಪುಷ್ಪಾದಿಮಂಟಪಾನ್ ।
ಧನ ಧಾನ್ಯಾಂಚಂಬರಾವಾಸ ಮಾಲಿಕಾವಲಿವಿಷ್ಟರಾನ್ ॥
ತಥಾಂಗಾಶ್ರಯ ಸದ್ಮಾನಿಗೋಃಶಾಲಾವಾಹನಾಸ್ಪದಾನ್ ।
ಅಪೂರ್ವಾನ್ ಅಥವಾ ಜೀರ್ಣಾನ್ ನಷ್ಟಾಂಶ್ಚೈವೋದ್ಧರಂತಿ ॥

ಭಗವಂತನಿಗೆ ಈ ರೀತಿ ಆಲಯ ಪ್ರಾಕಾರ ಗೋಪುರಗಳನ್ನು ನಿರ್ಮಾಣಮಾಡಿ ಆರಾಧಿಸುವ ಭಕ್ತರು ಪ್ರತಿ ಒಂದು ಊರಿನಲ್ಲಿಯೂ ಇರುತ್ತಾರೆ. ರಾಮ–ಕೃಷ್ಣಾದ್ಯವತಾರ ಮಾಡಿ ದುಷ್ಟ ಶಿಕ್ಷಣ– ಶಿಷ್ಟರಕ್ಷಣೆ ಮಾಡಿ ಧರ್ಮಸಂಸ್ಥಾಪನೆ ಮಾಡಬೇಕೆಂದು ವಿಭವಾವತಾರ ಮಾಡಿದ ಪರಮಾತ್ಮನ ಸಂಕಲ್ಪ ಪೂರ್ಣವಾಗದಿರುವುದರಿಂದ ಈ ಕಲಿಯುಗದಲ್ಲಿ ಅರ್ಚಾವತಾರ ಮುಖೇನ ಚೇತನರನ್ನು ಉದ್ಧಾರ ಮಾಡುತ್ತಿದ್ದಾನೆ.

ಪುಂಸಿ ಪುಂಸಿ ಭವಿಷ್ಯಾಮಿ ದಾರುಲೋಹ ಶಿಲಾಮಯಃ ।
ಅರ್ಚಾವತಾರ ರೂಪೇಣ ಲೋಕೇಸ್ಮಿನ್ ಚತುರಾನನ ॥
ಅವತಾರಂ ಕರಿಷ್ಯಾಮಿ ಹ್ರಿಯಾಲಕ್ಷ್ಮ್ಯಾ ಸಮನ್ವಿತಃ ।
ಪುಂಸಿ ಪುಂಸಿ ಭವಿಷ್ಯಾಮಿ ದಾರುಲೋಹ ಶಿಲಾಮಯಃ ॥

ಅರ್ಚಾವತಾರದ ಮಹಿಮೆಯನ್ನು ಶತ ಸಹಸ್ರವರ್ಷ ವರ್ಣಿಸಿದರೂ ಪೂರ್ಣವಾಗುವುದಿಲ್ಲ ಈ ರೀತಿ ಪರಮಾತ್ಮನಲ್ಲಿ ಸರ್ವಜ್ಞತ್ವ ಸರ್ವಶಕ್ತಿತ್ವ ಮತ್ತು ಸರ್ವವ್ಯಾಪಕತ್ವಾದಿ ಗುಣಗಳು ಇರುವಲ್ಲಿ ಆ ಸರ್ವಾಂತರ್ಯಾಮಿಯಾದ ಪರಾತ್ಪರ ವಸ್ತುವನ್ನು ಪ್ರತಿಷ್ಠೆ, ಆವಾಹನಾದಿಗಳನ್ನು ಮಾಡುವ ಅವಶ್ಯಕತೆಯಾದರೂ ಏನು ? ಅಂದರೆ—

ಯಥಾಕುಂಡಗತೋವಹ್ನಿಃ ವಾಯುನಾ ಜ್ವಲಿತೋ ಭವೇತ್ ॥
ತಥಾ ಬಿಂಬಗತೋ ವಿಷ್ಣುಃ ಮಂತ್ರೇಣಜ್ವಲಿತೋ ಭವೇತ್ ॥

ಯಾವ ರೀತಿ ಹೋಮಕುಂಡದ ಅಗ್ನಿಯು ವಾಯುವಿನ ಸ್ಪರ್ಶದಿಂದ ಪ್ರಜ್ವಲಿಸುತ್ತೋ ಹಾಗೆಯೇ ಬಿಂಬದಲ್ಲಿ ಮಂತ್ರರೂಪದಿಂದ ಆಹ್ವಾನಿತನಾದ

ವಿಷ್ಣುವು ಪ್ರಕಾಶಿಸುತ್ತಾನೆ. ಆದ್ದರಿಂದ ದೇವಸ್ಥಾನಗಳಲ್ಲಿ ಭಗವಂತನನ್ನು ಆರಾಧಿಸುತ್ತೇವೆ. ಈ ದೇವಮಂದಿರಗಳಲ್ಲಿ – ವಿಮಾನಗರ್ಭಗೃಹ ಪುಷ್ಪ ಮಂಟಪ, ಮಹಾಮಂಟಪ, ಧ್ವಜಸ್ತಂಭ, ಬಲಿಪೀಠ, ರಾಜಗೋಪುರಗಳನ್ನು ನಿರ್ಮಾಣ ಮಾಡುವ ಅಭಿಪ್ರಾಯ ಸ್ತುತ್ಯವಾಗಿರುತ್ತದೆ. ಭಗವನ್ಮಂದಿರಗಳ ಪ್ರಾಕಾರಗಳನ್ನು ಪಂಚಭೂತಮಯವಾಗಿಯೂ, ವಿಮಾನವನ್ನೂ ಶರೀರವನ್ನಾಗಿಯೂ ದಿವ್ಯಮಂಗಳ ವಿಗ್ರಹವನ್ನು ಜೀವನನ್ನಾಗಿಯೂ ಹೇಳಿರುತ್ತಾರೆ,

ಪಂಚಮಾವರಣಂ ಪೃಥ್ವೀ ಚತುರ್ಥಾವರಣಂ ಜಲಂ ।
ತೃತೀಯಾವರಣಂ ವಹ್ನಿಃ ದ್ವಿತೀಯಾವರಣಂ ಮರುತ್ ॥
ಪ್ರಥಮಾವರಣಂ ವ್ಯೋಮ್ನಿ ಗರ್ಭಗೇಹಂ ತಥೋದರಂ ।
ವಿಮಾನಂ ದೇಹಮಿತ್ಯುಕ್ತಂ ಪ್ರತಿಮಾ ಜೀವಮುಚ್ಯತೇ ॥

ಎನ್ನುವಂತೆ ಐದನೆಯ ಪ್ರಾಕಾರವು ಭೂಮಿಯಾಗಿಯೂ, ನಾಲ್ಕನೆಯ ಪ್ರಾಕಾರವು ಜಲವಾಗಿಯೂ ಮೂರನೆಯ ಪ್ರಾಕಾರವು ಅಗ್ನಿಯಾಗಿಯೂ, ಎರಡನೆಯ ಪ್ರಾಕಾರವು ವಾಯುವಾಗಿಯೂ ಪ್ರಥಮ ಪ್ರಾಕಾರ ಆಕಾಶವಾಗಿಯೂ, ಗರ್ಭಗೃಹವು ಉದರವಾಗಿಯೂ, ವಿಮಾನವಾಗಿಯೂ ಒಳಗಡೆ ಇರುವ ಅರ್ಚಾಮೂರ್ತಿಯು ಜೀವನನ್ನಾಗಿಯೂ ಹೇಳಲ್ಪಟ್ಟಿರುತ್ತದೆ. ಒಳಗಡೆ ಇರುವ ಅರ್ಚಾಮೂರ್ತಿಯು ವಿರಾಟ್ ಸ್ವರೂಪವೇ ಹೊರಗಡೆಯಿಂದ ಕಂಡುಬರುವ ವಿಮಾನದ ಸ್ವರೂಪ. ಅರ್ಚಾಮೂರ್ತಿ ಸೂಕ್ಷ್ಮರೂಪಿ–ವಿಮಾನ ಸ್ಥೂಲರೂಪಿ. ಈ ವಿಮಾನವನ್ನು ನೋಡಬೇಕಾದರೆ ದೇವಾಲಯದ ಒಳಗೆ ಹೋಗಬೇಕಾಗುತ್ತದೆ. ಆದ್ದರಿಂದಲೇ ಆಗಮಗಳು ತಿಳಿಸಿರುವಂತ ವಿಮಾನಕ್ಕೆ ಪ್ರತಿನಿಧಿಯಾಗಿ ಮಹಾದ್ವಾರಗಳಲ್ಲಿ ಗೋಪುರವನ್ನು ಪ್ರತಿಷ್ಠಾಪಿಸುತ್ತಾರೆ. ಈ ಗೋಪುರಗಳ ಪಂಕ್ತಿ ಒಂದರಿಂದ ಹನ್ನೆರಡರವರೆಗೆ ನಿರ್ಮಾಣಮಾಡಬಹುದು ಎಂದು ಪಾದ್ಮಸಂಹಿತೆ ತಿಳಿಸಿರುತ್ತದೆ. ಮಹಾವಿಷ್ಣುವು ವಾಮನನಾಗಿ ಬಂದು ತ್ರಿವಿಕ್ರಮನಾಗಿ ಬೆಳೆದ ವೈಭವವನ್ನು, ಭಗವದ್ಗೀತೆಯಲ್ಲಿ ತೋರಿಸಿದ ವಿಶ್ವರೂಪ ವೈಭವವನ್ನು, ಇನ್ನೂ ಅನೇಕ ಮಹಾತ್ಮರು ಋಷಿ–ಮುನಿ, ಆಚಾರ್ಯರುಗಳಮೂರ್ತಿ ದರ್ಶನದಿಂದ ಒಬ್ಬೊಬ್ಬ

ಚೇತನನಿಗೂ ದಿವ್ಯದರ್ಶನ ನೀಡಿ ಅದರ ಚಿಂತನೆ ಮತ್ತು ಧ್ಯಾನದಿಂದ ಅವನು ಸಂತುಷ್ಟನಾಗಲು ಗೋಪುರಗಳಲ್ಲಿ ಪ್ರತಿಮೆಗಳನ್ನು ನಿರ್ಮಿಸುತ್ತಾರೆ. ಭಗವಂತನ ವಿರಾಟ ಸ್ವರೂಪವೇ ಗೋಪ್ರರದರೂಪದಲ್ಲಿ ಕಂಗೊಳಿಸುತ್ತಿದೆ. ಉದಾಹರಣೆಯಾಗಿ :—

"ಭೂಃ ಪಾದೌಯಸ್ಯನಾಭಿಃ ವಿಯದಸುರ ನಿಲಶ್ಚಂದ್ರ ಸೂರ್ಯೌಚ
ನೇತ್ರೇ ಕರ್ಣಾವಾನಾಃ ಶಿರೋದ್ಯೌರ್ಮುಖಮಪಿ ದಹನೋಯಸ್ಯ
ವಾಸೋಯಮಬ್ಧಿಃ ॥ ಅಂತಸ್ಥಂಯಸ್ಯ ವಿಶ್ವಂ ಸುರ ನರಖಗಗೋ
ಭೋಗಿ ಗಂಧರ್ವ ದೈತ್ಯೈಃ ಚಿತ್ರಂ ರಂ ರಮ್ಯತೇತಂ
ತ್ರಿಭುವನವಪುಷಂ ವಿಷ್ಣು ಮೀಶಂ ನಮಾಮಿ ॥"

ಇತ್ಯಾದಿಗಳಿಂದ– ನಾರಾಯಣನಿಗೆ ಭೂಮಿ ಪಾದವಾಗಿಯೂ, ಅಂತರಿಕ್ಷ ನಾಭಿಯಾಗಿಯೂ, ಚಂದ್ರ ಸೂರ್ಯರು ದಿವ್ಯನೇತ್ರಗಳಾಗಿಯೂ, ದಿಕ್ಕುಗಳು ಕಿವಿಗಳಾಗಿಯೂ, ಸ್ವರ್ಗವು ಶಿರಸ್ಸಾಗಿಯೂ, ಅಗ್ನಿಯು ಮುಖ ಮಂಡಲವಾಗಿಯೂ, ಸಮುದ್ರವು ವಾಸಸ್ಥಾನವಾಗಿಯೂ ಇವೆ ಪರಮಾತ್ಮನ ಶ್ರೇಷ್ಠವಾದ ಉದರದಲ್ಲಿ ಎಲ್ಲಾ ಲೋಕಗಳೂ, ದೇವಾದಿಗಳೂ, ಅಸುರವರ್ಗಗಳೂ, ನಾಗ, ಗಂಧರ್ವ, ಕಿನ್ನರಾದಿಗಳೂ, ನರ–ಪಶು–ಪಕ್ಷಿ, ಮೃಗ, ಗಿಡ ಮರಗಳೂ ಕ್ರೀಡಿಸುತ್ತವೋ ಆ ಮಹಾವಿಷ್ಣುವು "ಅಣೋರಣೀ ಯಾನ್ ಮಹತೋಮಹೀಯಾನ್" ಎನ್ನುವಂತೆ ಇರುತ್ತದೆ ಈ ಗೋಪುರ! ಗೋಪುರದಲ್ಲಿ ರಾಮ–ಕೃಷ್ಣಾದಿ ಅವತಾರ ಲೀಲೆಗಳನ್ನು ಮತ್ತು ಮೊದಲು ತಿಳಿಸಿರುವ ಮೂರ್ತಿಗಳನ್ನು ನಿರ್ಮಾಣ ಮಾಡುತ್ತಾರೆ.

ಗೋಪುರದ ಶಿಖರದಲ್ಲಿ ಕುಂಭ-ಕಲಶಗಳನ್ನು ಸ್ಥಾಪಿಸಬೇಕು. ಈ ಕಲಶಗಳನ್ನು ಸ್ವರ್ಣ, ರಜತ (ಬೆಳ್ಳಿ) ತಾಮ್ರ ಮತ್ತು ಸುಧೆಗಳಿಂದ ಮಾಡಿರಬೇಕು. ಸ್ವರ್ಣವು ಐಶ್ವರ್ಯವನ್ನು, ರಜತವು (ಬೆಳ್ಳಿ) ಜ್ಞಾನವನ್ನು ತಾಮ್ರವು ಸೌಭಾಗ್ಯವನ್ನು ಕೊಡುತ್ತದೆ. ಸುಧೆಯು (ಗಾರೆ) ಸಕಲ ಅಭೀಷ್ಟಗಳನ್ನೂ ನೀಡುತ್ತದೆ. ಕಲಶಗಳ ಎಣಿಕೆ ಒಂದಾದರೆ ಸ್ವರ್ಗಫಲ. ಎರಡೆರಡಾಗಿ ಎಣಿಸಿದರೆ ಮುಕ್ತಿಯನ್ನು ನೀಡುತ್ತದೆ. ಹೀಗೆ 19 ರಿಂದ 20ರ ವರೆಗೆ ಸ್ಥಾಪಿಸಬಹುದು. ಕಲಶವಿಲ್ಲದ ಗೋಪುರ ಶಿರವಿಲ್ಲದ ಮುಂಡದಂತೆ. ಆದ್ದರಿಂದ ಅವಶ್ಯವಾಗಿ ಕಲಶವನ್ನು ಪ್ರತಿಷ್ಠಾಪಿಸಬೇಕು. ಗೋಪುರ ಸರ್ವೇಶ್ವರನ

ಪಂಚತತ್ವಮಯವಾದ ವಿರಾಟ ಸ್ವರೂಪವಾದ್ದರಿಂದ ಗೋಪುರಗಳಿಗೂ, ಬಿಂಬಗಳಿಗೂ ಪಂಚಭೂತಮಯವಾದ ಪಂಚವರ್ಣಕಲಾಪವನ್ನು ಮಾಡಬೇಕು, ಪಂಚಭೂತಗಳು ಪಂಚವರ್ಣಾಧಿದೇವತಾ–

"ಅವಶ್ಯಂ ವರ್ಣಲೇಪಸ್ಯಾತ್ ಇತಿ ಶಾಸ್ತ್ರವಿದೋವಿದುಃ"

ಈ ರೀತಿ ಗೋಪುರದ ಹಿರಿಮೆಯನ್ನು ಪಾದ್ಮಸಂಹಿತೆ ತಿಳಿಸಿರುತ್ತದೆ–

ಆಲಯ ಗೋಪುರೇ ಪೀಠೆ ಗರುಡಾತ್ಮಜ ಪುಷ್ಕರೇ ।
ಧ್ರುವಬೇರ ಸಮಂಕಾರ್ರ್ಯಾತ್ ಪ್ರಣಾಮಂತು ವಿಶೇಷತಃ ॥

ಭಗವಂತನ ಪಂಚಪ್ರಾಣಗಳು ಯಾವುವೆಂದರೆ—

ಆಲಯ, ಗೋಪುರ, ಮೂಲವಿಗ್ರಹ, ವಿಮಾನ, ಬಲಿಪೀಠ ಮೊದಲಾಗಿ ಈ ಐದು ಸ್ಥಳಗಳಲ್ಲೂ ಇರುವುದರಿಂದ ಗೋಪುರವಿಲ್ಲದ ದೇವಾಲಯಕ್ಕೆ ಗೋಪುರ ಅತ್ಯಾವಶ್ಯಕವಾಗಿ ನಿರ್ಮಾಣ ಮಾಡಬೇಕು. ವೈಖಾನಸ ಆಗಮದಲ್ಲಿ ದೇವಾಲಯವನ್ನು "ಕಮಲಾಲಯ" ಎಂದು ಹೇಳಿರುತ್ತಾರೆ.

"ವಿಮಾನಂ ಜಲಮಂ ಪುಷ್ಪಂ ಮೂಲಬೇರಂ ಕಂದಂ ಸಂಬಂಧಕೂರ್ಚಂ ಕೌತುಕಃ ಪುಷ್ಪಂ ಉತ್ಸವ ಸ್ನಾನ ಬಲಿ ಬೇರಾಣಿ ಪತ್ರಾಣಿ ಆಹತ್ಯ ಕಮಲಾಲಯಂ" ಎಂದು ವಿವದಪಡಿಸಿರುತ್ತಾರೆ. ನಮ್ಮ ಮಾಂಡವ್ಯನಗರದ ಲಕ್ಷ್ಮಿ ಜನಾರ್ದನಸ್ವಾಮಿ ದೇವಸ್ಥಾನದಲ್ಲಿ ವೈಖಾನಸಾಗಮ ರೀತಿಯಿಂದ ಪೂಜಾ ಪ್ರತಿಷ್ಠಾವಿಧಿಗಳು ನಡೆಯುತ್ತಿದೆ. ಈ ದೇವಾಲಯದ ನಾಮಧೇಯವೂ ಸಹ ಕಮಲ–ಲಕ್ಷ್ಮೀ ಎಂದೇ ಪ್ರಾರಂಭವಾಗುತ್ತದೆ. ಈ ರೀತಿಯಾದ ಗೋಪುರವನ್ನು ಯತೀಂದ್ರ ಪ್ರವಣ ಪ್ರಭಾವದಲ್ಲಿ—

"ದೂರೇಸ್ಥಿತೇಪಿಮಯಿ ದೃಷ್ಟಿಪಥಂ ಪ್ರಪನ್ನೇ
ದುಃಖಂವಿಹಾಯ ಪರಮಂ ಸುಖಮೇಶ್ಯತೀತಿ
ಮತ್ವೇವಯನ್ ಮನಚುಂಬಿ ಮತಾರ್ಕಿಹಂತಃ
ತದ್ಗೋಪುರಂ ಭಗವತಃ ಶರಣಂ ಪ್ರಪದ್ಯೇ ॥"

ನಮ್ಮ ಹಿರಿಯರು ಹೀಗೆ ಗೋಪುರವನ್ನೇ ಭಗವಂತನ ಸಾಕ್ಷಾತ್ಕಾರವೆಂದು ಧ್ಯಾನಮಾಡಿ ಪ್ರಪತ್ತಿ ಮಾಡಿರುತ್ತಾರೆ. ದೇವಾಲಯ ಎಲ್ಲಿದೆ ಎಂಬು

ದನ್ನು

ಮೊದಲು ದೃಷ್ಟಿ ಗೋಚರವಾಗುತ್ತದೆ

ಹಾಗಾದರೆ—ನೂರಾರು ವರ್ಷ ಪ್ರಾಚೀನವಾದ ಈ ದೇವಸ್ಥಾನದಲ್ಲಿ ಗೋಪುರ ಏಕೆ ಇರಲಿಲ್ಲ ? ಅದಕ್ಕೆ ಕಾರಣ–ಇದು ಒಂದು ಅಗ್ರಹಾರ. ಇಲ್ಲಿ ದೇವಾಲಯದ ಅತಿ ಸಮೀಪದಲ್ಲೇ ಮನೆಗಳನ್ನು ಕಟ್ಟಿದ್ದರು ಗೋಪುರದ ನೆರಳು ಮನೆಗಳ ಮೇಲೆ ಬೀಳಬಾರದೆಂದು ಶಾಸ್ತ್ರ. ಕಾಲಕ್ರಮದಲ್ಲಿ ಮನೆಗಳು ನೆಲಸಮನಾಗಿವೆ. ಈಗ ಗೋಪುರ ನಿರ್ಮಾಣವಾಗಲು 'ಶ್ರೀ ಲಕ್ಷ್ಮೀ ಜನಾರ್ಧನನ' ಅಂತಃಪ್ರೇರಣೆಯೇ ಮೂಲಕಾರಣ !

ಈ ದೇವಸ್ಥಾನದ ಮುಖ್ಯ ಕಾರ್ಯಕರ್ತರಾದ ಶ್ರೀ ಉ. ವೇ ಎನ್. ಎ. ಶಿಂಗ್ರಾಚಾರ್ಯರ ದೌಹಿತ್ರ ಚಿ॥ ರವಿ ಎಂಬ ಬಾಲಕ 'ಬಾಲ್ಯಾದಪಿ ಪ್ರಭೃತಿಃ' ಎನ್ನುವಂತೆ ಚಿಕ್ಕವಯಸ್ಸಿನಿಂದಲೇ ಪ್ರಹ್ಲಾದನ ಹಾಗೆ ಭಗವದ್ಭಕ್ತಿಯುತ. ಸ್ವಾಭವಿಕವಾದ ಈ ಗುಣದಿಂದ ಮನೆಯಲ್ಲಿ ಪ್ರತಿ ದಿನ ದೇವರ ವಿಗ್ರಹ, ಗೋಪುರಗಳನ್ನು ಇಟ್ಟುಕೊಂಡು ಆಡುವಾಗ ಮತ್ತು ದೇವಸ್ಥಾನಕ್ಕೆ ಬಂದಾಗ ತನ್ನ ತಾತನವರನ್ನು - ನಮ್ಮ ಊರಿನ ದೇವಸ್ಥಾನಕ್ಕೆ ಗೋಪುರ ಏಕೆ ಇಲ್ಲ, ಕಟ್ಟಿಸು ಎಂದು ತೊಂದರೆಪಡಿಸುತ್ತಿದ್ದನು. ಆಗ ಆ ಮಾತು ವಿನೋದೋಕ್ತಿಯಾಗಿದ್ದಿತು. ಒಂದು ದಿನವಾದರೆ ಎಲ್ಲರೂ ಮರೆತುಬಿಡುತ್ತಿದ್ದರು. ಆದರೆ ಭಗವತ್ಪ್ರೇರಣೆಯಿಂದ ಪದೇ ಪದೇ 5 ವರ್ಷದ ಬಾಲಕ ಹೇಳುತ್ತಿದ್ದುದಕ್ಕೆ ಕಾರಣ—

ಅಂತಃ ಪ್ರವಿಷ್ಟಶಾಸ್ತಾ ಜನಾನಾಂ ಸರ್ವಾತ್ಮಾ ।
ಶಾಸ್ತಾ ವಿಷ್ಣುರಶೇಷಸ್ಯ ಜಗತೋಯೋ ಹೃದಿಸ್ಥಿತಃ ॥

ಎನ್ನುವಂತೆಯೇ ಈ ಬಾಲಕನ ಮೂಲಕ ಪ್ರೇರೇಪಿಸಿ 500-600 ವರ್ಷಗಳ ಅನಂತರ ತನ್ನ ದೇವಾಲಯಕ್ಕೆ ಗೋಪುರ ನಿರ್ಮಾಣ ಮಾಡಿಸಿಕೊಂಡ ಈ ಲಕ್ಷ್ಮೀಜನಾರ್ಧನಸ್ವಾಮಿಯ ಮಹಿಮೆಯನ್ನು ನನ್ನಿಂದ ವರ್ಣಿಸಲು ಹೇಗೆ ತಾನೇ ಸಾಧ್ಯ ; ಈ ಪವಿತ್ರವಾದ ಕಾರ್ಯಕ್ಕೆ ಘನ ಸರ್ಕಾರ

ಎಂವರೆ ಮುಜರಾಯಿ ಇಲಾಖೆಯಿಂದ ಅತ್ಯಧಿಕ ಸಹಾಯ ನೀಡಿರುತ್ತಾರೆ. ದಿವ್ಯಕ್ಷೇತ್ರಗಳಲ್ಲಿ ಈ ರೀತಿಯ ಆಶ್ಚರ್ಯಕರವಾದ ಸಂಗತಿಗಳು ನಡೆದಿರುವುದು ಸತ್ಯ. ಶ್ರೀ ವೈಷ್ಣವರು ಪ್ರಪ್ರಥಮವಾಗಿ ಪಠಿಸುವ "ಶ್ರೀ ಶೈಲೇಶ ದಯಾ ಪಾತ್ರ" ಸ್ತುತಿಯನ್ನು ಸುಧಾಶ್ರಯನೆಂಬ ಶ್ರೀ ರಂಗನಾಥನು ಅಥವಾ ಅಳ ಗಿಯ ಮಣವಾಳನು 5 ವರ್ಷದ ಬಾಲಕನಾಗಿ ಬಂದೇ ಆಚಾರ್ಯರನ್ನು ಸ್ತುತಿ ಸಿದನು. ಹಾಗೆಯೇ ಈ ಬಾಲಕನೂ ಭಗವಂತನ ದಿವ್ಯಗೋಪುರ ನಿರ್ಮಾಣಕ್ಕೆ ಪ್ರೇರಕನಾದನು. ಈ ರೀತಿ ಅರ್ಚಾವತಾರದಲ್ಲಿ ಭಗವಂತನು ತನ್ನ ಅಭೀಷ್ಟ ವನ್ನು ಭಕ್ತರ ಮುಖೇನ ಪಡೆಯುತ್ತಾನೆ. ಈ ಊರಿನ, ರಾಷ್ಟ್ರದ, ವಿಶ್ವದ ಎಲ್ಲಾ ವರ್ಗದ ಮಂಗಳವನ್ನುಂಟು ಮಾಡಬೇಕೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ

"ಸರ್ವೇ...

ವಿ

ಅಧಿಕ ಆಷಾಢ
ಪ್ರಥಮ-ದ್ವಿತೀ

ತಿರುನಾರಾಯಣನ್,
ಮಂಡ್ಯ.

# ಶ್ರೀ ರೇಡಿಯೋ ಎಲೆಕ್ಟ್ರಿಕಲ್ಸ್

**ಜೈನ್ ಸ್ಟ್ರೀಟ್, ಮಂಡ್ಯ**

PHILIPS

ಅಧಿಕೃತ ಮಾರಾಟಗಾರರು

**ಫಿಲಿಪ್ಸ್ ರೇಡಿಯೋಗಳು**
**ಫಿಲಿಪ್ಸ್ ಲ್ಯಾಂಪ್‌ಗಳು**
**ಪ್ರೆಸ್ಟೀಜ್ ಪ್ರೆಷರ್ ಕುಕ್ಕರ್**
**ರ್‍ಯಾಲಿ ಮತ್ತು ಓರಿಯಂಟ್ ಫ್ಯಾನ್‌ಗಳು**
**ಆಲ್ವಿನ್ ರೆಫ್ರಿಜರೇಟರುಗಳು**


ಸೂಟ್ ಆಲ್ ಪ್ರಿಂಟರ್ಸ್, ಬೆಂಗಳೂರು-3